# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಐವನ್ ಡಿ ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 175 (199) |
| ಉತ್ತರಿಸಬೇಕಾದ ದಿನಾಂಕ | 18.08.2026 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2025-26ನೇ ಸಾಲಿನ ಆಯ-ವ್ಯಯದಲ್ಲಿ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಈ ಆಯ-ವ್ಯಯದಲ್ಲಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ; ಪ್ರಗತಿ ಹಂತದಲ್ಲಿರುವ ಕಾಮಗಾರಿಗಳು ಯಾವುವು; ಎಷ್ಟು ಕಾಮಗಾರಿಗಳು ಮುಕ್ತಾಯಗೊಂಡಿದೆ; (ವಿವರ ನೀಡುವುದು) | 2025-26 ನೇ ಸಾಲಿನ ಆಯ-ವ್ಯಯ ಕಂಡಿಕೆ-298 ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿರುತ್ತದೆ.<br><br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ರಾಮನಗರ ಮತ್ತು ಉಲ್ಲಾಳಕ್ಕೆ 705 ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರು ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಅಮೃತ್-2.0 ಯೋಜನೆಯಡಿಯಲ್ಲಿ 233 ಕುಡಿಯುವ ನೀರು ಯೋಜನೆಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ. ಇದರೊಂದಿಗೆ, 142 ಕೋಟಿ ರೂ. ವೆಚ್ಚದಲ್ಲಿ, ಶಿಕಾರಿಪುರ, ಸಾಗರ, ಐನಾಪುರ, ಎಮ್.ಕೆ.ಹುಬ್ಬಳ್ಳಿ, ಕುಡಚಿ, ಬೈಲಹೊಂಗಲ, ಶಹಾಪುರ ಹಾಗೂ ಶ್ರೀರಂಗಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು ಕಲ್ಪಿಸುವ ಗುರಿಯನ್ನು ಹೊಂದಲಾಗಿದೆ.<br><br>ಅದರಂತೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ರಾಮನಗರ ಮತ್ತು ಉಳ್ಳಾಲದಲ್ಲಿ ಒಟ್ಟು ರೂ.705 ಕೋಟಿ ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಿ ಪ್ರಸ್ತುತ ಚಾಲನೆ ಮಾಡಲಾಗಿದೆ ಹಾಗೂ ಇದರೊಂದಿಗೆ ರೂ.142 ಕೋಟಿ ವೆಚ್ಚದಲ್ಲಿ ಶಿಕಾರಿಪುರ, ಸಾಗರ, ಐನಾಪುರ, ಎಂ.ಕೆ. ಹುಬ್ಬಳ್ಳಿ ಕುಡಚಿ, ಬೈಲಹೊಂಗಲ, ಹಾಗೂ ಶ್ರೀರಂಗಪಟ್ಟಣದಲ್ಲಿ ಒಳ ಚರಂಡಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಪ್ರಸ್ತುತ ಚಾಲನೆ ಮಾಡಲಾಗಿದೆ. ಶಹಾಪುರ ಪಟ್ಟಣದಲ್ಲಿ ರೂ.292.98 ಕೋಟಿ ವೆಚ್ಚದಲ್ಲಿ ಒಳ ಚರಂಡಿ ಕಾಮಗಾರಿ ಪ್ರಗತಿಯಲ್ಲಿದೆ.<br><br>ಕೇಂದ್ರ ಸರ್ಕಾರವು 226 ನಗರ ಸ್ಥಳೀಯ ಸಂಸ್ಥೆಗಳ (227 ಯೋಜನೆಗಳು) ಕುಡಿಯುವ ನೀರು ಸರಬರಾಜು ಕಾಮಗಾರಿಯ ಕ್ರಿಯಾ ಯೋಜನೆಗೆ ರೂ.9574.00 ಕೋಟಿಗಳಿಗೆ ಅನುಮೋದನೆ ನೀಡಿರುತ್ತದೆ. ಇದರಲ್ಲಿ, 220 ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. 215 ಯೋಜನೆಗಳಿಗೆ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಬಾಕಿ 5 ಯೋಜನೆಗಳಿಗೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |

<table>
<tr><td></td><td></td><td>215 ಕುಡಿಯುವ ನೀರು ಸರಬರಾಜು ಕಾಮಗಾರಿಯ ಪೈಕಿ, ಕೆಳಗಿನ 11 ಯೋಜನೆಗಳನ್ನು ಮುಕ್ತಾಯಗೊಳಿಸಿ ಚಾಲನೆಗೊಳಿಸಲಾಗಿರುತ್ತದೆ.<br><br>1. ಇಂಡಿ<br>2. ಕಾಪು<br>3. ಸೊರಬ<br>4. ಸಾಗರ<br>5. ಹುಕ್ಕೇರಿ<br>6. ರಾಮಣಹಳ್ಳಿ<br>7. ಶ್ರೀರಾಮಪುರ<br>8. ಹೂಟಗಳ್ಳಿ (Tranche-1)<br>9. ಹೂಟಗಳ್ಳಿ (Tranche-2)<br>10. ಮುಧೋಳ<br>11. ನರಗುಂದ</td></tr>
<tr><td>ಆ)</td><td>ಮಂಡಳಿಯಲ್ಲಿ ನಡೆಯುತ್ತಿರುವ ಕೇಂದ್ರ ಪ್ರಾಯೋಜಿತ ಯೋಜನೆಗಳು ಹಾಗೂ ರಾಜ್ಯ ಸರ್ಕಾರದ ಪ್ರಾಯೋಜಿತ ಯೋಜನೆಗಳಾವುವು: (ವಿವರ ನೀಡುವುದು)</td><td>ಮಂಡಳಿ ವತಿಯಿಂದ ಕೇಂದ್ರ ಪುರಸ್ಕೃತ ಅಮೃತ್ 1.0 ಕಾರ್ಯಕ್ರಮದಡಿ, ರೂ.156.00 ಕೋಟಿಯ ಅಂದಾಜು ಮೊತ್ತದಲ್ಲಿ ಬೆಳಗಾವಿ ನಗರದ ಒಳಚರಂಡಿ ಯೋಜನೆಯು ಪ್ರಗತಿಯಲ್ಲಿರುತ್ತದೆ.<br><br>ಮುಂದುವರೆದು, ರಾಜ್ಯ ಸರ್ಕಾರ ಪ್ರಾಯೋಜಿತ ಯೋಜನೆಗಳ ವಿವರಗಳನ್ನು ಅನುಬಂಧ-2 ರಲ್ಲಿ ಮತ್ತು ಕೇಂದ್ರ ಸರ್ಕಾರದ ಪ್ರಾಯೋಜಿತ ಅಮೃತ್ 2.0 ಯೋಜನೆಗಳ ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.</td></tr>
<tr><td>ಇ)</td><td>ಕಳೆದ 3 ವರ್ಷಗಳಿಂದ ಮಂಡಳಿಯು ಎಷ್ಟು ಹಣವನ್ನು ಯಾವ ಯಾವ ಹಣಕಾಸು ಸಂಸ್ಥೆಗಳಲ್ಲಿ ಠೇವಣಿ ಇರಿಸಲಾಗಿದೆ; (ವಿವರ ನೀಡುವುದು)</td><td>ವಿವರವನ್ನು ಅನುಬಂಧ-4 ರಲ್ಲಿ ಒದಗಿಸಲಾಗಿದೆ.</td></tr>
<tr><td>ಈ)</td><td>ಮಂಡಳಿ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಯೋಜನೆಯಡಿಯಲ್ಲಿ ಕಾಮಗಾರಿಗಳು ನಡೆಯುತ್ತಿದೆ; ಕಾಮಗಾರಿಗೆ ಮಂಜೂರಾದ ಅನುದಾನ ಎಷ್ಟು; ಬಿಡುಗಡೆಯಾಗಿರುವ ಹಣ ಹಾಗೂ ಬಾಕಿ ಇರುವ ಹಣ ಎಷ್ಟು? (ವಿವರ ನೀಡುವುದು)</td><td>ಕ.ನ.ನೀ.ಸ. ಮತ್ತು ಒ.ಚ. ಮಂಡಳಿ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೊಳ್ಳಲಾಗುತ್ತಿರುವ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳ ವಿವರಗಳು ಈ ಕೆಳಗಿನಂತಿವೆ;<br><br>ಕೇಂದ್ರ ಸರ್ಕಾರದ ಪ್ರಗತಿಯಲ್ಲಿರುವ ನೀರು ಸರಬರಾಜು ಯೋಜನೆಗಳು:
<table>
<tr><th>ಕ್ರ. ಸಂ</th><th>ನಗರ ಸ್ಥಳೀಯ ಸಂಸ್ಥೆ</th><th>ಮಂಜೂರಾದ ಅನುದಾನ (ರೂ.ಕೋಟಿಗಳಲ್ಲಿ)</th><th>ಬಿಡುಗಡೆ ಯಾಗಿರುವ ಹಣ (ರೂ. ಕೋಟಿಗಳಲ್ಲಿ)</th><th>ಬಿಡುಗಡೆಗೆ ಬಾಕಿ ಇರುವ ಹಣ (ರೂ. ಕೋಟಿಗಳಲ್ಲಿ)</th></tr>
<tr><td>1.</td><td>ಸುಳ್ಯ ನಗರ ಪಂಚಾಯತ್</td><td>57.66</td><td>45.24</td><td>12.42</td></tr>
<tr><td>2.</td><td>ಬಂಟ್ವಾಳ ಪುರಸಭೆ</td><td>40.16</td><td>25.99</td><td>14.17</td></tr>
<tr><td>3.</td><td>ಉಳ್ಳಾಲ ನಗರಸಭೆ</td><td>70.00</td><td>49.91</td><td>20.09</td></tr>
<tr><td>4.</td><td>ಸೋಮೇಶ್ವರ ಪುರಸಭೆ</td><td>45.60</td><td>40.25</td><td>5.35</td></tr>
</table></td></tr>
</table>

| | | | | |
|---|---|---|---|---|
| 5. | ಕೋಟೆಕಾರ್ ಪಟ್ಟಣ ಪಂಚಾಯತ್ | 37.50 | 30.63 | 6.87 |
| 6. | ಬಜ್ಪೆ ಪಟ್ಟಣ ಪಂಚಾಯತ್ | 168.12 | 121.95 | 46.17 |
| 7. | ಕಿನ್ನಿಗೋಳಿ ಪಟ್ಟಣ ಪಂಚಾಯತ್ | | | |
| 8. | ಮೂಲ್ಕಿ ನಗರ ಪಂಚಾಯತ್ | | | |
| 9. | ಮೂಡಬಿದ್ರೆ ಪುರಸಭೆ | 77.08 | 59.43 | 17.65 |

**ರಾಜ್ಯ ಸರ್ಕಾರದ ಅನುದಾನಿತ ನೀರು ಸರಬರಾಜು ಯೋಜನೆಗಳು:**

| ಕ್ರ. ಸಂ. | ನಗರ ಸ್ಥಳೀಯ ಸಂಸ್ಥೆ | ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) | ಬಿಡುಗಡೆಯಾಗಿರುವ ಹಣ (ರೂ. ಕೋಟಿಗಳಲ್ಲಿ) | ಬಿಡುಗಡೆಗೆ ಬಾಕಿ ಇರುವ ಹಣ (ರೂ. ಕೋಟಿಗಳಲ್ಲಿ) |
|---|---|---|---|---|
| 1. | ಉಳ್ಳಾಲ ನಗರಸಭೆ | 249.48 | 228.54 | 20.94 |
| 2. | ಬಂಟ್ವಾಳ ಪುರಸಭೆ | 58.49 | 56.07 | 2.42 |
| 3. | ಧರ್ಮಸ್ಥಳ ದೇವಸ್ಥಾನ ಮತ್ತು ಪಟ್ಟಣ | 26.06 | 23.13 | 2.93 |

**ರಾಜ್ಯ ಸರ್ಕಾರದ ಅನುದಾನಿತ ಒಳಚರಂಡಿ ಯೋಜನೆಗಳು:**

| | | | | |
|---|---|---|---|---|
| 1. | ಬಂಟ್ವಾಳ ಪುರಸಭೆ | 56.54 | 1.42 | 55.12 |
| 2. | ಉಳ್ಳಾಲ ನಗರಸಭೆ | 65.71 | 40.74 | 24.97 |
| 3. | ಬೆಳ್ತಂಗಡಿ ಪಟ್ಟಣ ಪಂಚಾಯತ್ | 10.30 | 8.11 | 2.19 |
| 4. | ಸುಬ್ರಹ್ಮಣ್ಯ ದೇವಸ್ಥಾನ ಮತ್ತು ಪಟ್ಟಣ | 7.90 | 6.18 | 1.72 |

ಸಂಖ್ಯೆ : ನಅಇ 94 ಯುಎಂಎಸ್ 2026

(ಡಾ.ಯತೀಂದ್ರ ಸಿದ್ದರಾಮಯ್ಯ)
ನಗರಾಭಿವೃದ್ಧಿ ಸಚಿವರು